ಕಾರ್ಯಾದೇಶ ನೀಡಲಾಗಿದೆ.ಕಾಮಗಾರಿಯನ್ನು ಪೂರ್ಣಗೊಳಿಸಲು 4 ತಿಂಗಳ ಕಾಲಾವಕಾಶ ನೀಡಲಾಗಿದೆ.

ಸದರಿ ಕಾಮಗಾರಿಗೆ ಈವರೆಗೆ ರೂ 6,52,653/–ಗಳನ್ನು ಸಮಿತಿಯಿಂದ ಬಿಡುಗಡೆ ಮಾಡಲಾಗಿದೆ.

ರಾಷ್ಟ್ರೀಯ ತೋಟಗಾರಿಕಾ ಮಿಷನ್‌ನಿಂದ ಸಹಾಯಧನ ಬಿಡುಗಡೆಯಾಗಿಲ್ಲದೆ ಇರುವುದರಿಂದ ಹಾಗೂ ಸಮಿತಿಯು ಆರ್ಥಿಕವಾಗಿ ಸಧೃಢವಾಗಿಲ್ಲದ ಕಾರಣ ಆರ್ಥಿಕ ಮುಗ್ಗಟ್ಟಿನಿಂದ ಕಾಮಗಾರಿಯ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ.

ಈ) ಬೀದರ್ ಸಮಿತಿಯ ಹಳ್ಳದಕೆರೆ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಕಾಮಗಾರಿಯಲ್ಲಿನ ಗಿಡಗಂಟಿಗಳನ್ನು ತೆಗೆಯುವ ಹಾಗೂ ಬುನಾದಿ ಕೆಲಸ ಪ್ರಗತಿಯಲ್ಲಿದೆ.

ಔರಾದ್ ಸಮಿತಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಅಂಗಡಿ ಮಳಿಗೆಗಳು ಲಿಂಟಲ್ ಮಟ್ಟದಲ್ಲಿರುತ್ತವೆ ಹಾಗೂ ರಸ್ತೆ ಮತ್ತು ಚರಂಡಿ ಕೆಲಸಗಳನ್ನು ಪ್ರಾರಂಭಿಸಲಾಗಿದೆ.

ಉ) ರಾಷ್ಟ್ರೀಯ ತೋಟಗಾರಿಕಾ ಯೋಜನೆ ಯಡಿಯಲ್ಲಿ ಭಾಲ್ಕಿ ಮತಕ್ಷೇತ್ರದ ಯಾವುದೇ ಮಾರುಕಟ್ಟೆ ಸಮಿತಿಯ ಪ್ರಾಂಗಣವನ್ನು ಆಯ್ಕೆ ಮಾಡಿಕೊಂಡಿರುವುದಿಲ್ಲ.

ಊ) ಸ್ಥಳ ಲಭ್ಯವಿರುವುದಿಲ್ಲ.

ತೋಟಗಾರಿಕೆ ಉತ್ಪನ್ನಗಳ ಆವಶ್ಯಕ ಮತ್ತು ಅವುಗಳಿಗೆ ಒದಗಿಸಬೇಕಾದ ಮೂಲಭೂತ ಸೌಲಭ್ಯಗಳ ಅವಶ್ಯಕತೆ ಗಮನಿಸಿ ರಾಷ್ಟ್ರೀಯ ತೋಟಗಾರಿಕಾ ಮಿಶನ್ ಯೋಜನೆಯಡಿಯಲ್ಲಿ ಮಾರುಕಟ್ಟೆ ಆಯ್ಕೆ ಮಾಡಲಾಗುವುದು.

ರಸ್ತೆ ನಿರ್ಮಾಣ

187(309) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಲೋಕೋಪಯೋಗಿ ವಿಭಾಗದಿಂದ ಕಳೆದ ಮೂರು ವರ್ಷದಿಂದ ಇಲ್ಲಿಯವರೆವಿಗೆ ಯಾವ್ಯಾವ ಯೋಜನೆಯಡಿಯಲ್ಲಿ ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ?

ಆ) ಇದಕ್ಕಾಗಿ ಪ್ರತಿ ವರ್ಷ ವೆಚ್ಚ ಮಾಡಲಾದ ಹಣವೆಷ್ಟು?

ಇ) ಈ ಕಾಮಗಾರಿಗಳನ್ನು ಪೂರೈಸಿದ್ದಕ್ಕಾಗಿ ಇನ್ನೂ ಎಷ್ಟು ಹಣವನ್ನು ಇಲ್ಲಿಯವರೆವಿಗೆ ಬಾಕಿ ನೀಡಬೇಕಾಗಿದೆ (ಪೂರ್ಣ ವಿವರ ಒದಗಿಸುವುದು)

ಈ) ಕಾಮಗಾರಿಗಳನ್ನು ತೆಗೆದುಕೊಂಡಿರುವ ಯಾವ್ಯಾವ ಗುತ್ತಿಗೆದಾರರು ನಿಗದಿತ ಸಮಯದೊಳಗೆ ಉತ್ತಮ ಗುಣಮಟ್ಟದ ಕಾಮಗಾರಿಗಳನ್ನು ಮಾಡಿದ್ದಾರೆ (ಸಂಪೂರ್ಣ ವಿವರ ಒದಗಿಸುವುದು)

ಉ) ಯಾವ ಗುತ್ತಿಗೆದಾರರು ಕಳೆದ ಮೂರು ವರ್ಷಗಳ ಅವಧಿಯಲ್ಲಿ ಅಪೂರ್ಣ ಕಾಮಗಾರಿಗಳನ್ನು ಮಾಡಿದ್ದಾರೆ

ಊ) ನಿಗದಿತ ಅವಧಿಯಲ್ಲಿ ಉತ್ತಮ ಕಾಮಗಾರಿಗಳನ್ನು ಕೈಗೊಂಡವರನ್ನು ಸರ್ಕಾರ ಯಾವ ರೀತಿ ಪ್ರೋತ್ಸಾಹಿಸಿದೆ ಮತ್ತು ಅಪೂರ್ಣ ಕಾಮಗಾರಿಗಳನ್ನು ನಿರ್ವಹಿಸಿರುವ ಗುತ್ತಿಗೆದಾರರ ವಿರುದ್ಧ ಯಾವ ಕ್ರಮಗಳನ್ನು ಕೈಗೊಂಡಿದೆ (ಪೂರ್ಣ ವಿವರ ಒದಗಿಸುವುದು)

ಋ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಪೈಕಿ ಎಷ್ಟರಲ್ಲಿ ಕಳಪೆ ಕಾಮಗಾರಿಗಳು ಪತ್ತೆಯಾಗಿವೆ: ಸಂಬಂಧಪಟ್ಟವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ಒದಗಿಸುವುದು)

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಬೀದರ್ ಲೋಕೋಪಯೋಗಿ ವಿಭಾಗದಿಂದ ಕಳೆದ ಮೂರು ವರ್ಷದಿಂದ ಇಲ್ಲಿಯವರೆವಿಗೆ ಈ ಕೆಳಕಂಡ ಯೋಜನೆಯಡಿಯಲ್ಲಿ ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

2007–08	2008–09	2009–10
5054 ನಬಾರ್ಡ್	5054 ನಬಾರ್ಡ್	5054 ನಬಾರ್ಡ್
5054 ಓಆರ್ಎಫ್	5054 ಓಆರ್ಎಫ್	5054 ಓಆರ್ಎಫ್
5054 ಸಿಆರ್ಎಫ್	5054 ಸಿಆರ್ಎಫ್	5054 ಸಿಆರ್ಎಫ್
5054 ನಂಜುಂಡಪ್ಪ	5054 ಎಸ್ಸಿಎಸ್ಪಿ	5054 ನಂಜುಂಡಪ್ಪ

5054 ಎಸ್‌ಸಿಎಸ್‌ಪಿ	5054 ಟಿಎಸ್‌ಪಿ	5054 ಎಸ್‌ಸಿಎಸ್‌ಪಿ
5054 ಟಿಎಸ್‌ಪಿ	3054 ಮುಮಂಗ್ರಾರಅನಿ	5054 ಟಿಎಸ್‌ಪಿ
3054 ಮುಮಂಗ್ರಾರಅನಿ	3054–ರಾಜ್ಯಹೆದ್ದಾರಿ ನಿರ್ವಹಣೆ	3054 ಮುಮಂಗ್ರಾರಅನಿ
3054–12ನೇ ಹಣಕಾಸು		3054–ಸುವರ್ಣ ರಸ್ತೆ

ಆ) ಮಾಹಿತಿಗಳನ್ನು ಅನುಬಂಧ–1ರಲ್ಲಿ ವಿವರಿಸಲಾಗಿದೆ.

ಇ) ಮಾಹಿತಿಗಳನ್ನು ಅನುಬಂಧ–1ರಲ್ಲಿ ವಿವರಿಸಲಾಗಿದೆ.

ಈ) ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಉ) ಯಾವುದೇ ಗುತ್ತಿದಾರರು ಕಾಮಗಾರಿಗಳನ್ನು ಅಪೂರ್ಣ ಸ್ಥಿತಿಯಲ್ಲಿ ಕೈಬಿಟ್ಟ ವರದಿ ಇರುವುದಿಲ್ಲ.

ಊ) ನಿಗದಿತ ಅವಧಿಯಲ್ಲಿ ಉತ್ತಮ ಗುಣಮಟ್ಟದ ಕೆಲಸ ಪೂರ್ಣಗೊಳಿಸಿದ ಗುತ್ತಿಗೆದಾರರಿಗೆ ಸರ್ಕಾರದಿಂದ ಪ್ರಶಂಸನಾ ಪತ್ರ ನೀಡಲಾಗುವುದು, ಹಾಗೂ ಯಾವುದೇ ಗುತ್ತಿಗೆದಾರರು ಕಾಮಗಾರಿಗಳನ್ನು ಅಪೂರ್ಣ ಸ್ಥಿತಿಯಲ್ಲಿ ಕೈಬಿಟ್ಟ ವರದಿ ಇರುವುದಿಲ್ಲ.

ಋ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕಳಪೆ ಕಾಮಗಾರಿಗಳು ಆದ ಬಗ್ಗೆ ವರದಿಯಾಗಿರುವುದಿಲ್ಲ.

ಅನುಬಂಧ–1

ಲೋಕೋಪಯೋಗಿ ಇಲಾಖೆ ಉತ್ತರ ವಲಯದ ವ್ಯಾಪ್ತಿಯ ಬೀದರ ವಿಭಾಗದಿಂದ ಕಳೆದ ಮೂರು ವರ್ಷಗಳಿಂದ ವಿವಿಧ ಯೋಜನೆಗಳಡಿ ರಸ್ತೆ ಕಾಮಗಾರಿಗಳಿಗೆ ಪ್ರತಿ ವರ್ಷ ಮಾಡಲಾದ ವೆಚ್ಚ ಹಾಗೂ ಬಾಕಿ ನೀಡಬೇಕಾದ ಹಣದ ವಿವರ

(ವಿಧಾನ ಸಭಾ ಸದಸ್ಯರಾದ ಮಾನ್ಯ ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) ಇವರು ಮಂಡಿಸಿದ ಚುಕ್ಕೆ ಗುರುತಿಲ್ಲದ ಪ್ರಶ್ನೆ 309ರ ಉಪಪ್ರಶ್ನೆ 'ಅ' ಮತ್ತು 'ಇ' ಗಳಿಗೆ ವಿವರ)

(ರೂ. ಲಕ್ಷಗಳಲ್ಲಿ)

ಕ್ರ ಸ ಂ.	ಲೆಕ್ಕ ಶೀರ್ಷಿಕೆ	2007–08		2008–09		2009–10	
		ವೆಚ್ಚ	ಬಿಡುಗ	ವೆಚ್ಚ	ಬಿಡುಗ	ವೆಚ್ಚ	ಬಿಡು

		ಮಾಡಲಾದ ಹಣ	ಡೆ ಮಾಡ ಬೇಕಾದ ಬಾಕಿ ಹಣ	ಮಾಡಲಾದ ಹಣ	ಡೆ ಮಾಡ ಬೇಕಾದ ಬಾಕಿ ಹಣ	ಮಾಡಲಾದ ಹಣ	ಗಡೆ ಮಾಡ ಬೇಕಾದ ಬಾಕಿ ಹಣ
1	2	3	4	5	6	7	8
1	5054 ಇತರೆ ರಸ್ತೆ ನಿರ್ಮಾಣ	147.96	–	413.07	–	920.59	627.11
2	5054 ಸುವರ್ಣ ರಸ್ತೆ ಅಭಿವೃದ್ಧಿ ಯೋಜನೆ	–	–	–	–	324.51	23.46
3	5054 ಡಾ: ಡಿ.ಎಂ. ನಂಜುಂಡಪ್ಪ ವರದಿ ಯೋಜನೆ	383.12	–	36.14	–	433.35	612.08
4	5054 ಎಸ್‌ಸಿಎಸ್‌ಪಿ	116.93	–	36.41	–	414–46	66.28
5	5054 ಟಿಎಸ್‌ಪಿ	27.82	–	9.59	–	127.15	6.74
6	5054 ನಬಾರ್ಡ್	584.77	–	1101.79	–	358.29	443.92

7	5054 ಕೇಂದ್ರ ರಸ್ತೆ ನಿಧಿ	45.90	–	64.88	–	45.55	94.76
8	5054 ಮು.ಮುಂ.ಗ್ರಾ.ರ.ಅ.ನಿಧಿ	733.77	–	874.43	–	265.45	730.45
9	3054–ರಾಜ್ಯ ಹೆದ್ದಾರಿ ನಿರ್ವಹಣೆ	–	–	68.59	–	157.40	834.38
10	3054–12ನೇ ಹಣಕಾಸು	867.52	–	521.22	–	652.90	125.87
	ಒಟ್ಟು	2907.79	–	3126.12	–	3699.65	3565.05

ಅನುಬಂಧ–2

ವಿಧಾನಸಭೆಯ ಸದಸ್ಯರಾದ ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ) ಇವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂ.309ರ "ಕ್ರಮ ಸಂ.ಈ"ಕ್ಕೆ ಹೆಚ್ಚುವರಿ ಮಾಹಿತಿ

* * * * *

ಲೋಕೋಪಯೋಗಿ ಇಲಾಖೆ ಉತ್ತರ ವಲಯದಡಿಯ ಬೀದರ ವಿಭಾಗದ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ವಹಿಸಿಕೊಂಡ ಈ ಕೆಳಕಾಣಿಸಿದ ಗುತ್ತಿಗೆದಾರರು ನಿಗದಿತ ಅವಧಿಯೊಳಗೆ ಉತ್ತಮ ಗುಣಮಟ್ಟದ ಕಾಮಗಾರಿಗಳನ್ನು ನಿರ್ವಹಿಸಿದ್ದಾರೆ.

1) ಶ್ರೀ ಎಸ್.ಬಲಬೀರ್‌ಸಿಂಗ್
2) ಮೆ॥ ಕೊಟರ್ಕಿ ಕನ್‌ಸ್ಟ್ರಕ್ಷನ್ಸ್

3) ಶ್ರೀ ಗುರುನಾಥ ಕೊಳ್ಳೂರ
4) ಶ್ರೀ ಬಸವರಾಜ ಕೋರಿ
5) ಮೆ॥ ಬಾಲಾಜಿ ಕನ್‌ಸ್ಟ್ರಕ್ಷನ್ಸ್ ಉಮರ್ಗಾ
6) ಶ್ರೀ ಆರ್.ಜಿ.ಸಾಗರ್
7) ಶ್ರೀ ಶಿವಕುಮಾರ ತಮಸಂಗೆ
8) ಶ್ರೀ ರವಿ ಬೆಟ್ಟದ್
9) ಶ್ರೀ ವಿ.ಗಾರಾಮಂಗೆ
10) ಶ್ರೀ ಶರಣಪ್ಪ ಪಂಚಾಕ್ಷರಿ
11) ಶ್ರೀ ಗೋವಿಂದ ನಿರಗುಡಿ
12) ಶ್ರೀ ಗೋವಿಂದ ರೆಡ್ಡಿ
13) ಶ್ರೀ ಪ್ರಭುರಾವ್ ಕೊಟರ್ಕಿ
14) ಶ್ರೀ ಶರಣಪ್ಪ ವಂಕಿ
15) ಶ್ರೀ ಬಿ.ವಿ.ಪಾಂಡೆ
16) ಶ್ರೀ ಮಚೇಂದ್ರರೆಡ್ಡಿ
17) ಶ್ರೀ ಅಬ್ದುಲ್ ಶುಕೂರ್
18) ಶ್ರೀ ಶಿವಾಜಿ ರಾಮಾ ಚವ್ಹಾಣ
19) ಶ್ರೀ ವಿಜಯಕುಮಾರ ಪಾಟೀಲ
20) ಶ್ರೀ ಮಡಿವಾಳಯ್ಯ ಸ್ವಾಮಿ
21) ಶ್ರೀ ರಾಜಶೇಖರ ಪಾಟೀಲ್ ಅಷ್ಟೂರ್
22) ಶ್ರೀ ಬಾಬು ರೆಡ್ಡಿ

ಇನ್ನುಳಿದ ಕೆಲಸವು ಗುತ್ತಿಗೆದಾರರು ಕೆಲವು ಅನಿವಾರ್ಯ ಕಾರಣಗಳಿಂದಾಗಿ ನಿಗದಿತ ಅವಧಿಗಿಂತ ಹೆಚ್ಚಿನ ಸಮಯ ತೆಗೆದುಕೊಂಡರು ಸಹ ಉತ್ತಮ ಗುಣಮಟ್ಟದಿಂದ ಕಾಮಗಾರಿಗಳನ್ನು ನಿರ್ವಹಿಸುತ್ತಿದ್ದಾರೆ.

ದಿನಾಂಕ: 15.05.2010

ಪ್ರಶಂಸಾಪತ್ರ

ಶ್ರೀ ಗುರುನಾಥ ಕೊಳ್ಳೂರ, ಮೊದಲನೇ ದರ್ಜೆ ಗುತ್ತಿಗೆದಾರರು, ಬೀದರ್‌ರವರು ಬೀದರ್ ಜಿಲ್ಲೆ ಬೀದರ್ ತಾಲ್ಲೂಕಿನ ವನಮಾರಪಳ್ಳಿ–ರಾಯಚೂರು

ರಾಜ್ಯ ಹೆದ್ದಾರಿ–15ರ ಕಿ.ಮೀ. 0.00 ರಿಂದ 47.00 (ಕಿಮೀ 32.00 ರಿಂದ 47.00)ರವರೆಗಿನ ರೂ. 490.00 ಲಕ್ಷ ಮೊತ್ತದ ರಸ್ತೆ ಕಾಮಗಾರಿಯನ್ನು ಇ–ಟೆಂಡರ್ ಮೂಲಕ ವಹಿಸಿಕೊಂಡಿದ್ದು, ಸದರಿ ಕಾಮಗಾರಿಯು ಪೂರ್ಣಗೊಳ್ಳಲು ಆರು ತಿಂಗಳ ಕಾಲಾವಧಿಯಿದ್ದರೂ ಸಹ ನಿಗದಿತ ಅವಧಿಗಿಂತ ಮೊದಲೇ ಅಂದರೆ ಕೇವಲ ಒಂದು ತಿಂಗಳಲ್ಲಿ ಉತ್ತಮ ಗುಣಮಟ್ಟದ ಪರಿಕರಗಳೊಂದಿಗೆ ಮುಗಿಸಿರುವುದು ಇಲಾಖೆಗೇ ಹೆಮ್ಮೆಯ ವಿಷಯವಾಗಿದ್ದು ಸದರಿ ಗುತ್ತಿಗೆದಾರರು ಅಭಿನಂದನೆಗೆ ಪಾತ್ರರಾಗಿದ್ದಾರೆಂದು ಅಧೀಕ್ಷಕ ಅಭಿಯಂತರರು ಮತ್ತು ಮುಖ್ಯ ಅಭಿಯಂತರರು (ಸಂಪರ್ಕ ಮತ್ತು ಕಟ್ಟಡ (ಉತ್ತರ ವಲಯ), ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಯವರು ಅಭಿಪ್ರಾಯ ಪಟ್ಟಿದ್ದು ಅದನ್ನು ತಮಗೆ ತಿಳಿಸಲು ಹರ್ಷಿಸುತ್ತಾ, ಮುಂದೆಯೂ ಸಹ ಇದೇ ರೀತಿ ಇಲಾಖೆಯ ಕಾಮಗಾರಿಗಳನ್ನು ಅತ್ಯಂತ ನಿಷ್ಠೆ ಪ್ರಾಮಾಣಿಕತೆಯಿಂದ ನಿರ್ವಹಿಸುವಿರೆಂದು ಆಶಿಸುತ್ತಾ, ಈಗ ಕೈಗೊಂಡಿರುವ ಕಾಮಗಾರಿಯು ಅತ್ಯುತ್ತಮವಾದ ಸಾಧನೆಯೆಂದು ಹೇಳಬಯಸುತ್ತೇನೆ.

ಗೆ:

ಶ್ರೀ ಗುರುನಾಥ ಕೊಳ್ಳೂರ
ಪ್ರಥಮ ದರ್ಜೆ ಗುತ್ತಿಗೆದಾರರು
ಬೀದರ್

ರೈತರಿಗೆ ರಸಗೊಬ್ಬರ ಪೂರೈಕೆ

188 (561) ಶ್ರೀ ಹ್ಯಾರಿಸ್ ಎನ್ ಎ:(ಶಾಂತಿನಗರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ರೈತರಿಗೆ ರಸಗೊಬ್ಬರ ಪೂರೈಕೆಯನ್ನು ವ್ಯವಸ್ಥಿತವಾಗಿ ಮಾಡಲು ಹಮ್ಮಿಕೊಂಡಿರುವ ಕ್ರಮಗಳೇನು;

ಆ) ಸಕಾಲದಲ್ಲಿ ರಸಗೊಬ್ಬರ ಪೂರೈಕೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ರಸಗೊಬ್ಬರ ಖರೀದಿಗಾಗಿ ಸರ್ಕಾರ ಮೀಸಲ್ಪಟ್ಟ ಹಣದ ಮೊತ್ತ ಎಷ್ಟು;